## ಪ್ರಧಾನ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಜಮಖಂಡಿ

O S ನಂ- 3/2019

Pw-3

| | |
|---|---|
| ಹೆಸರು | ಸಂತೋಷ ತಂದೆ ಬವಾನಸಿಂಗ ರಜಪೂತ್ |
| ವಯಸ್ಸು | 40 |
| ಉದ್ಯೋಗ | ಎಚ್ ಸಿ ಡಿ ಎಸ್ ಪಿ ಕಚೇರಿ ವಿಜಯಪೂರ |
| ವಾಸಸ್ಥಳ | ವಿಜಯಪೂರ |

ದಿನಾಂಕಃ22-02-2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಶ್ರೀ. ಎಸ್ ಸಿ ಕೆ ವಾದಿ ಪರ ವಕೀಲರಿಂದ-**

ನಾನು ಈಗ 2018 ರಿಂದ ಎಸ್ ಪಿ ಕಚೇರಿ ವಿಜಯಪೂರದಲ್ಲಿ ಎಚ್ ಸಿ ಅಂತಾ ಕರ್ತವ್ಯ ನಿರ್ವಹಿಸುತ್ತಿದ್ದೇನೆ . ನಾನು ಈ ಹಿಂದೆ 2005 ರಿಂದ 2018 ನೇ ಸಾಲಿನ ವರೆಗೆ ತಾಲೂಕಾ ಬೂ ಮಾಪಕರು ಎಂದು ಕೆಲಸ ಮಾಡಿರುತ್ತೇನೆ .

ಅರ್ಜಿದಾರರು ಸಲ್ಲಿಸಿದ ಅರ್ಜಿಯನ್ನು ಪಿ ಡಿ ಓ ರವರು ಸ್ವೀಕರಿಸಿ ತದನಂತರ ನಮ್ಮ ಕಚೇರಿಗೆ ಸದರಿ ಅರ್ಜಿ ಬಂದ ನಂತರ ಪಂಚಾಯಿತಿ ಅಧಿಕಾರಿಗಳ ಮೂಲಕ ಅಳತೆ ಕಾರ್ಯವನ್ನು ಮಾಡಲು ಸ್ಥಳಕ್ಕೆ ಹೋಗುತ್ತೇವೆ . ಈ ದಿನ ನಾನು ನ್ಯಾಯಾಲಯದ ಮುಂದೆ ಭೂ ಮಾಪಕರು ಆಳತೆ ಮಾಡಬೇಕೆಂದು ದಿನಾಂಕ 05-11-2014 ರಂದು ಕರ್ನಾಟಕ ಸರ್ಕಾರದವರು ನೀಡಿದ ಒಂದು ಸುತ್ತೋಲೆಯ ಪ್ರತಿಯನ್ನು ಹಾಜರು ಪಡಿಸಿರುತ್ತೇನೆ. ಅದು ಗಣಕಯಂತ್ರದ ನಕಲು ಆಗಿದ್ದು ಅದನ್ನು ನಿಪಿ-45 ಎಂದು ಗುರುತಿಸಲಾಯಿತು .

ನಾನು ಈ ಕೇಸಿನ ವಾದಿಯವರು ನೀಡಿದ ಅರ್ಜಿಯ ಮೇರೆಗೆ ದಾವಾ ಖುಲ್ಲಾ ಜಾಗೆಯನ್ನು ಅಳತೆ ಮಾಡಲು ದಿನಾಂಕ 14-12-2016 ರಂದು ಸ್ಥಳಕ್ಕೆ ಬೇಟಿ ನೀಡಿರುತ್ತೇನೆ . ಆ ಸಮಯದಲ್ಲಿ ಗ್ರಾಮ ಪಂಚಾಯತಿ ಅಧಿಕಾರಿಗಳಾದ ಪಿ ಡಿ ಓ , ಅಧ್ಯಕ್ಷರು , ಸದಸ್ಯರು , ಅರ್ಜಿದಾರರು , ಮತ್ತು ಲಾಗುದಾರರು ಹಾಗೂ ಪಂಚರು ಹಾಜರು ಇದ್ದರು . ಈ ದಿನ ನ್ಯಾಯಾಲಯದ ಮುಂದೆ ನ್ಯಾಯಾಲಯದ ಆದೇಶದ ಪ್ರಕಾರ ನಾನು ಪಿ ಟಿ ಶೀಟ್ , ಜಂಟಿ ಆಳತೆ ವರದಿಯನ್ನು ಹಾಜರು ಪಡಿಸಿದ್ದು ಅವುಗಳನ್ನು ಕ್ರಮವಾಗಿ ನಿಪಿ- 46 ಸಾಕ್ಷಿ ಸಹಿಯನ್ನು ನಿಪಿ- 46 ಎ ಮತ್ತು ನಿಪಿ- 47 ಎಂದು, ಗುರುತಿಸಲಾಯಿತು . ಸದರಿ ದಾಖಲೆಗಳು ಈಗಾಗಲೇ ಪ್ರಾಸಾ-1 ರವರ ಮೂಲಕ ನಿಪಿ- 4 ರಿಂದ 6 ಎಂದು ಗುರುತಿಸಲಾಗಿದೆ . ಸ್ಥಳಕ್ಕೆ ಹೋಗಿ ನಾನು ದಕ್ಷಿಣ ಭಾಗದಲ್ಲಿ ದುರ್ಗಪ್ಪಾ ಮಾಂಗ ರವರ ಮನೆ ಇದ್ದು , ಪೂರ್ವ ಪಶ್ಚಿಮ

ಬಾಗಕ್ಕೆ ಖುಲ್ಲಾ ಜಾಗೆ ಇದ್ದು ಮತ್ತು ಉತ್ತರ ದಿಕ್ಕಿಗೆ ಬೇರೆ ಗ್ರಾಮಸ್ಥರ ಮನೆಗಳು ಇದ್ದು ನಾನು ಅಳತೆ ಕಾರ್ಯವನ್ನು ಉತ್ತರ ಭಾಗದಿಂದ ಪ್ರಾರಂಬಿಸಿ ಪೂರ್ವ ಪಶ್ಚಿಮ ಬಾಗದಲ್ಲಿ ಅಳತೆ ಮಾಡಿ ದಕ್ಷಿಣ ಭಾಗಕ್ಕೆ ಅಳತೆ ಕಾರ್ಯ ಮಾಡಲು ಬಂದಾಗ ದುರ್ಗಪ್ಪಾ ಮಾಂಗ ಎಂಬುವವರು ತಕರಾರು ಮಾಡಿ ದಕ್ಷಿಣ ಭಾಗದಲ್ಲಿ 5X4 ಅಡಿ ಅಳತೆಯ ಒಂದು ಕಟ್ಟೆ ಇದ್ದು ಅದು ಅವರ ಜಾಗೆಯಲ್ಲಿ ಕಟ್ಟಿಕೊಟ್ಟಿರುತ್ತೇವೆ ಎಂದು ತಿಳಿಸಿರುತ್ತಾರೆ . ನಾನು ಪಂಚಾಯತಿ ರವರು ಮಾಡಿದ ಠರಾವು ಮತ್ತು ಅರ್ಜಿದಾರರು ಸಲ್ಲಿಸಿದ ಅರ್ಜಿಯಲ್ಲಿ ನೋಡಿದಾಗ ಸದರಿ ಕಟ್ಟೆಯು ಅರ್ಜಿದಾರರ ಜಾಗೆಯಲ್ಲಿ ಬರುತ್ತದೆ ಎಂದು ಕಂಡು ಬಂದಿರುತ್ತದೆ .

ಆಳತೆ ಮಾಡುವ ಸಮಯದಲ್ಲಿ ಪಶ್ಚಿಮ ಭಾಗದ ದಕ್ಷಿಣ ದಿಕ್ಕಿನಲ್ಲಿ ಸತ್ಯವ್ವಾ ರಾಮಚಂದ್ರ ಕಾಂಬಳೆ ಎಂಬುವವದು 5X2 ಅಡಿ ಅಳತೆಯ ಒಂದು ಗುಡಿಸಲು ಕಟ್ಟಿಕೊಂಡಿದ್ದು, ಸದರಿ ವಿಚಾರವನ್ನು ನಾನು ನನ್ನ ಅಳತೆಯ ವರದಿಯಲ್ಲಿ ನಮೂದು ಮಾಡಿದ್ದು ನಮ್ಮ ಸತ್ಯವ್ವಾ ರಾಮಚಂದ್ರ ಕಾಂಬಳೆ ಇವರಿಗೆ ವಿಚಾರಿಸಿದಾಗ ಸದರಿ ಗುಡಿಸಲು ಹೆಚ್ಚುವರಿಯಾಗಿ ಕಟ್ಟಿಕೊಂಡಿದ್ದು ಅದನ್ನು ತೆರವುಗೊಳಿಸಲು ಸತ್ಯವ್ವಾ ಕಾಂಬಳೆ ಇವರ ಮಗನಾದ ಪುಂಡಲೀಕ ರಾಮಚಂದ್ರ ಕಾಂಬಳೆ ಇತನು ಒಪ್ಪಿಕೊಂಡಿರುತ್ತಾರೆ ಅದರಂತೆ ಅವರು ವರದಿಯ ಸಹಿ ಸಹ ಮಾಡಿರುತ್ತಾರೆ . ಸ್ಥಳದಲ್ಲಿ ನಾನು ಅಳತೆ ಕಾರ್ಯವನ್ನು ಮಾಡಿ ಜಂಟಿ ಅಳತೆ ವರದಿಯನ್ನು ತಯಾರಿಸಿದ ನಂತರ ಸ್ಥಳದಲ್ಲಿ ಹಾಜರು ಇದ್ದ ಎಲ್ಲ ವ್ಯಕ್ತಿಗಳ ಸಹಿಗಳನ್ನು ಪಡೆದುಕೊಂಡಿರುತ್ತೇನೆ . ಆದರೆ ತಕರಾರು ಮಾಡಿದ ದುರ್ಗಪ್ಪಾ ಮಾಂಗ ಮತ್ತು ಮಾಹಾದೇವ ಬಿರಾದರ ಮತ್ತು ಶಂಕರ ಬಿರಾದರ ರವರ ಸದರಿ ವರದಿಗೆ ಸಹಿ ಮಾಡಲು ನಿರಾಕರಿಸಿರುತ್ತಾರೆ .

ನಾನು ನನ್ನ ಹಾತ್ ನಕಾಶೆಯಲ್ಲಿ ವಿ ಪಿ ಸಿ ನಂಬರ 29 ರ ಅಳತೆಯನ್ನು ನಮೂದು ಮಾಡಿರುತ್ತೇನೆ ಉತ್ತರ ಭಾಗದ ಪೂರ್ವ ಪಶ್ಚಿಮದ ಅಳತೆ 73 ಅಡಿ ಅದೇ ರೀತಿ ದಕ್ಷಿಣದ ಭಾಗದ ಪೂರ್ವ ಪಶ್ಚಿಮ ಅಳತೆ 73 ಅಡಿ . ಪೂರ್ವ ಭಾಗದ ಉತ್ತರ ದಿಕ್ಷಿಣ ಅಳತೆ 65 ಅಡಿ. ಪಶ್ಚಿಮ ಭಾಗದ ಉತ್ತರ ದಿಕ್ಷಿಣ ಅಳತೆ 62 ಅಡಿ ಇರುತ್ತದೆ . ನಾನು ಜಂಟಿ ಅಳತೆ ವರದಿಯನ್ನು ತಯಾರಿಸಿದ ನಂತರ ನಿಪಿ–45 ಸೂತ್ತೋಲೆ ಪ್ರಕಾರ ನನ್ನ ಹಾತ್ ನಕಾಶೆ , ವರದಿಯನ್ನು ಪಿ ಡಿ ಓ ಮುತ್ತೂರ ಗ್ರಾಮ ಪಂಚಾಯತಿ ರವರಿಗೆ ನನ್ನ ವರದಿ ದಿನಾಂಕ 15–12–2016 ರ ಪ್ರಕಾರ ಕೊಟ್ಟಿರುತ್ತೇನೆ . ಸದರಿ ಪತ್ರ ನೋಡುತ್ತಿದ್ದು ಅದನ್ನು ನಿಪಿ– 48 ಎಂದು ಗುರುತಿಸಲಾಯಿತು . ಸಾಕ್ಷಿ ಸಹಿಯನ್ನು ನಿಪಿ– 48 ಎ ಎಂದು ಗುರುತಿಸಲಾಯಿತು . ಸದರಿ ನನ್ನ ವರದಿಯ ಪ್ರಕಾರ ನಾನು ಗ್ರಾಮ ಪಂಚಾಯತಿ ಠರಾವು ಪ್ರಕಾರ ಜಂಟಿ ಅಳತೆ ಕೆಲಸವನ್ನು ಪೂರೈಸಿ ಸ್ಥಳದಲ್ಲಿ ಬಂದ ತಕರಾರು , ಅಡಚಣೆ ಮತ್ತು ಅಳತೆಗಳನ್ನು ಸದರಿ ಪತ್ರದಲ್ಲಿ ತೋರಿಸಿ ಸದರಿ ಅರ್ಜಿಯನ್ನು ನಾನು ವಿಲೆಗೆ ಹಾಕಿರುತ್ತಾನೆ .

( ಸಾಕ್ಷಿಯು ಅಸಲು ದಾಖಲೆಗಳನ್ನು ನ್ಯಾಯಾಲಯದ ಮುಂದೆ ಹಾಜರು ಪಡಿಸಿ ಅದರ ಪ್ರತಿಯನ್ನು ಕೇಸಿನ ಕಡತದಲ್ಲಿ ಇಡಲಾಯಿತು ಮತ್ತು ಅಸಲು ದಾಖಲೆಗಳನ್ನು ಸಾಕ್ಷಿಗೆ ಮರಳಿ ಕೊಡಲಾಯಿತು )

**ಪಾಟೀ ಸವಾಲುಃ ಶ್ರೀ. ಸಿ ಎಸ್ ಬಿ 3 ರಿಂದ 7, 9 ರಿಂದ 13 ನೇ ಪ್ರತಿವಾದಿ ಪರ ವಕೀಲರಿಂದ–** ನಾನು ಜಿ ಪಿ ಎಸ್ ಮೂಲಕ ಆಳತೆ ಕಾರ್ಯವನ್ನು ಮಾಡಿರುವದಿಲ್ಲ . ಆದರೆ ಸ್ಥಳಕ್ಕೆ ಬೇಟಿ ನೀಡಿ ಖುದ್ದಾಗಿ ಅಳತೆ ಕಾರ್ಯ ಮಾಡಿರುತ್ತೇನೆ . ನಾನು ಅಳತೆ ಕಾರ್ಯವನ್ನು ಮಾಡಿದ ಖುಲ್ಲಾ ಜಾಗೆಯ ದಾಖಲೆಗಳು ನಮ್ಮ ಕಚೇರಿಯಲ್ಲಿ ಲಭ್ಯ ಇರುವದಿಲ್ಲ . ನಾನು ಆಳತೆ ಮಾಡಿದ ಖುಲ್ಲಾ ಜಾಗೆಕ್ಕೆ ಯಾವುದೇ ರೀತಿಯ ಕೌಂಪೌಂಡ ಅಥವಾ ತಂತಿ ಬೇಲಿಗಳು ಇರಲಿಲ್ಲ . ನಾನು ಅಳತೆ ಕಾರ್ಯಕ್ಕೆ ಹೋದಾಗ ಖುಲ್ಲಾ ಜಾಗೆಯಲ್ಲಿ ಗಿಡ ಕಂಟಿಗಳು ಯಾವುದು ಸಹ ಇರಲಿಲ್ಲ . ನಾನು ಆಳತೆ ಕಾರ್ಯವನ್ನು ಪೂಟ್ ದಲ್ಲಿ ಮಾಡಿದ್ದು ಮಿಟರ್ ದಲ್ಲಿ ಮಾಡಿರುವದಿಲ್ಲ .

ಜಂಟಿ ಅಳತೆ ವರದಿಯನ್ನು ತಯಾರಿಸು ಕಾಲಕ್ಕೆ ಪಿ ಡಿ ಓ , ಅಧ್ಯಕ್ಷರು ಸದಸ್ಯರು ಹಾಜರು ಇದ್ದು ಅವರಿಗೆ ಅಳತೆ ಬಗ್ಗೆ ಮಾಹಿತಿ ಇದೆಯೋ ಇಲ್ಲವೋ ಬಗ್ಗೆ ನನಗೆ ಗೊತ್ತಿರುವದಿಲ್ಲ . ಖುಲ್ಲಾ ಜಾಗೆಯಲ್ಲಿ ಇಲ್ಲಿ ಇಲ್ಲಿ ಕಲ್ಲು ಗಳು ಇದ್ದ ಬಗ್ಗೆ ನನ್ನ ಜಂಟಿ ಅಳತೆ ವರದಿಯಲ್ಲಿ ನಮೂದು ಮಾಡಿರುತ್ತೇನೆ . ನಾನು ಅಳತೆ ಕಾರ್ಯವನ್ನು Theodolite mark ದಿಂದ ಅಳತೆಯನ್ನು ಪ್ರಾರಂಬವನ್ನು ಮಾಡಿರುವದಿಲ್ಲ . ಸಾಕ್ಷಿ ಮುಂದುವರೆದು ಅದರ ಅವಶ್ಯಕತೆ ಇರುವದಿಲ್ಲ ಎಂದು ನುಡಿಯುತ್ತಾರೆ . ನಾನು ಪಂಚಾಯತಿಯ ಠರಾವು ದಾಖಲೆಯನ್ನು ಹಾಗೂ ಲಾಗುದಾರರ ದಾಖಲೆಗಳನ್ನು ನೋಡಿ ಅಳತೆ ಕಾರ್ಯವನ್ನು ಮಾಡಿರುತ್ತೇನೆ . ಸದರಿ ದಾಖಲೆಗಳನ್ನು ನನ್ನ ವರದಿಯೊಂದಿಗೆ ಲಗತ್ತಿಸಿ ನ್ಯಾಯಾಲಯದ ಮುಂದೆ ಹಾಜರು ಪಡಿಸಿರುವದಿಲ್ಲ . ಲಾಗುದಾರರ ದಾಖಲೆಗಳನ್ನು ನೋಡಿ ಆಳತೆ ಕಾರ್ಯವನ್ನು ಮಾಡಿರುತ್ತೇನೆ ಎಂದು ಸುಳ್ಳಾಗಿ ಹೇಳುತ್ತಿದ್ದೇನೆಂದರೆ ಸರಿಯಲ್ಲ . ನಾನು ಯಾವುದೇ ದಾಖಲಾತಿಗಳನ್ನು ನೋಡದೇ ಪಂಚಾಯತಿ ರವರ ಹೇಳಿದಂತೆ ಅಳತೆ ಕಾರ್ಯವನ್ನು ಮಾಡಿರುತ್ತೇನೆ ಎಂದರೆ ಸರಿಯಲ್ಲ .

ಪಂಚಾಯತಿ ವತಿಯಿಂದ ಅಳತೆ ಮಾಡುವ ಪೂರ್ವದಲ್ಲಿ ನಕ್ಷೆ ಅಥವಾ ಅದಕ್ಕೆ ಸಂಬಂದಪಟ್ಟ ದಾಖಲೆಗಳನ್ನು ನಾನು ತೆಗೆದುಕೊಂಡಿರುವದಿಲ್ಲ . ಆಳತೆ ಮಾಡುವ ಪೂರ್ವದಲ್ಲಿ ನಾನು ಲಾಗುದಾರರಿಗೆ ಎಲ್ಲರಿಗೂ ನೋಟಿಸನ್ನು ಕೊಟ್ಟಿರುತ್ತೇನೆ . ಸ್ಥಳದಲ್ಲಿ ಕೇಲವು ಜನರು ಅಳತೆ ಮಾಡಲು ತಕರನ್ನು ತೆಗೆದಿರುತ್ತಾರೆ ಎಂದರೆ ಸರಿ . ತಕರಾರು ಮಾಡಿದ ವ್ಯಕ್ತಿಗಳ ಜಾಗೆಯನ್ನು ನಾನು ಅಳತೆಯನ್ನು ಮಾಡಿರುತ್ತೇನೆ ಎಂಬ ಪ್ರಶ್ನೆಗೆ ಸಾಕ್ಷಿ ದುರ್ಗಪ್ಪಾ ಮಾಂಗ ರವರು ಕಟ್ಟೆಯ ಇಕಡೆ ಅಳತೆ ಮಾಡಬೇಡಿ ಎಂದು ತಕರಾರು ಮಾಡಿರುತ್ತಾರೆ ಎಂದು ನುಡಿಯುತ್ತಾರೆ .

ಲಾಗೂದಾರರು ಅಳತೆ ಕಾರ್ಯವನ್ನು ಮಾಡಬೇಡಿ ಎಂದು ತಕರಾರನ್ನು ಮಾಡಿದರು ಸಹ ನಾನು ಅರ್ಜಿದಾರಿಗೆ ಅನುಕೂಲವಾಗಲೀ ಎಂದು ವರದಿಯನ್ನು ಮತ್ತು ಪಿ ಟಿ ಶೀಟವನ್ನು ತಯಾರಿಸಿರುತ್ತೇನೆ ಎಂದರೆ ಸರಿಯಲ್ಲ . ಸುತ್ತಮುತ್ತಲಿನಲ್ಲಿ ಇದ್ದಂತಹ ಚರಂಡಿ , ಬಾಗಿಲುಗಳು , ಪನ್ನೊಳಿ , ಕಿಡಿಕಿಗಳ ಬಗ್ಗೆ ನಾನು ನನ್ನ ವರದಿಯಲ್ಲಿ ಕಾಣಿಸಿರುವದಿಲ್ಲ ಎಂದರೆ ಸರಿ . ಹಳ್ಳಿಗಳಲ್ಲಿ ಆಸ್ತಿಗಳಿಗೆ ಸಂಬಂದಿಸಿದಂತೆ ಯಾವುದೇ ರೀತಿಯ ದಾಖಲೆಗಳು ಲಭ್ಯ ಇಲ್ಲದೇ ಇದ್ದ ಕಾರಣ ಅಳತೆ ಕಾರ್ಯವನ್ನು ಮಾಡಲು ಆಗುವದಿಲ್ಲ ಎಂದರೆ ಸಾಕ್ಷಿ ಅದರ ಬಗ್ಗೆ ಸರ್ಕಾರದ ಸುತ್ತೋಲೆಯಲ್ಲಿ ನಮೂದು ಮಾಡಿರುತ್ತಾರೆ ಎಂದು ನುಡಿಯುತ್ತಾರೆ . ನನ್ನ ವರದಿಯಲ್ಲಿ ನಾನು ಯಾರು ಯಾರು ಎಷ್ಟು ಜಾಗೆಯಲ್ಲಿ ಉಪಬೋಗ ಮಾಡುತ್ತಿದ್ದ ಬಗ್ಗೆ ನಮೂದು ಮಾಡಿರುವದಿಲ್ಲ ಎಂದರೆ ಸರಿಯಲ್ಲ . ಸದರಿ ಖುಲ್ಲಾ ಜಾಗೆಯು ಇದೆ ವಿ ಪಿ ಸಿ ನಂಬರಕ್ಕೆ ಸೇರಿರುತ್ತದೆ ಎಂದು ನನಗೆ ಹೇಳಲು ಬರುವದಿಲ್ಲ ಎಂದರೆ ಸರಿ. ನಾನು ಅರ್ಜಿದಾರರಿಗೆ ಅನುಕೂಲವಾಗಲೀ ಎಂದು ಉದ್ದೇಶದಿಂದ ಸ್ಥಾನಿಕ ಚೌಕಾಶಿ ಮಾಡದೇ ಪಂಚಾಯಿತಿ ರವರ ಕೊಟ್ಟ ದಾಖಲೆಗಳನ್ನು ನೋಡಿ ಖೊಟ್ಟಿ ಪಿ ಟಿ ಶೀಟ ಮತ್ತು ವರದಿಯನ್ನು ತಯಾರಿಸಿರುತ್ತೇನೆ ಎಂದರೆ ಸರಿಯಲ್ಲ . ನನಗೆ ಹಳ್ಳಿಗಳಲ್ಲಿ ಅಳತೆ ಕಾರ್ಯವನ್ನು ಮಾಡಲು ಯಾವುದೇ ರೀತಿಯ ಅದಿಕಾರ ಇರುವದಿಲ್ಲ ಎಂದರೆ ಸರಿಯಲ್ಲ .

ಪಾಟೀ ಸವಾಲುಃ- 2 ನೇ ಪ್ರತಿವಾದಿ ಪರ ವಕೀಲರು ಹಾಜರು ಇದ್ದು ತನ್ನ ಪರ ಯಾವುದೇ ಪಾಟೀ ಸವಾಲು ಇರುವದಿಲ್ಲ ಎಂದು ತಿಳಿಸಿರುತ್ತಾರೆ .

**ಮರು ವಿಚಾರಣೆಃ ಇಲ್ಲಾ**

ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೆ.ಸರಿ ಇದೆ

sd/-

ಪ್ರಧಾನ ದಿವಾಣಿ ಮತ್ತು ಜೆ.ಎಂ.ಎಫ್.ಸಿ.

ನ್ಯಾಯಾಧೀಶರು ಜಮಖಂಡಿ